ಬಂದಿರುವ ಡಾಂಬರು, ಶಾಲೆ, ಮಾಸ್ತರರು, ಪಂಚಾಯಿತಿ ಕಟ್ಟಡ ಇವೆಲ್ಲವೂ ಊರು ಪರಿವರ್ತನೆಯಾದುದರ ಸಂಕೇತವಲ್ಲವೆ? ಈ ಮಾರ್ಪಾಡು ಎಲ್ಲಿಂದ ಆಯಿತು? ಯಾವಾಗ ಆಯಿತು? ತಮ್ಮ ವರ್ತನೆಯಲ್ಲಿಯೂ ಒಂದು ಬದಲಾವಣೆ ಬಂದಿದೆಯಲ್ಲವೆ? ಮತ್ತೊಬ್ಬರ ಜೀವನದ ಬಗ್ಗೆ ತಾವು ಎಷ್ಟೊಂದು ಬೀಸುಬೀಸಾಗಿ ರಸ್ತೆಗಳಲ್ಲಿ, ಹೊಟೇಲಿನಲ್ಲಿ, ಓಣಿಯಲ್ಲಿ ಮಾತಾಡುತ್ತಿದ್ದೆವಲ್ಲ? ಈಗ ಹಾಗೆ ಮಾತಾಡಲಿಕ್ಕೆ ಸಾಧ್ಯವಿದೆಯೆ? ಅಕಸ್ಮಾತ್ ದೇವಪ್ಪ ತಮ್ಮೂರಿಗೆ ಬರದೆ ಇದ್ದಿದ್ದರೆ ತಮ್ಮೂರಿನ ಸ್ಥಿತಿ ಹೇಗಿರುತ್ತಿತ್ತು? ಅವನು ಬರದೆ ಇದ್ದಿದ್ದರೆ ತಾವು ನೆಮ್ಮದಿಯಿಂದ ಇರಬಹುದಿತ್ತೆಂದು ಹೇಳುವವರ ಸಂಖ್ಯೆಯೇನೂ ಕಡಿಮೆಯಿಲ್ಲ. ಆದರೆ ಮಲ್ಲೂರು ಎಂದರೆ ಈಗ ಬೈಲಹೊಂಗಲದಲ್ಲಿ ಕಣ್ಣರಳಿಸಿ ನೋಡುತ್ತಾರೆ.

ಅಕಸ್ಮಾತ್ ಅನುಸೂಯ ಅವನನ್ನು ಮದುವೆಯಾಗಿ ಇಲ್ಲಿಗೆ ಬಂದಿರದಿದ್ದರೆ ಹೆಂಗಸರು ಸಹ ಸಂತೆಗೆ ಹೋಗಬಹುದೆಂಬುದು ಹೇಗೆ ತಿಳಿಯುತ್ತಿತ್ತು? ಮುಖದ ಪೌಡರ್ ತಮ್ಮಲ್ಲಿ ವಿಶ್ವಾಸ ತುಂಬಬಲ್ಲದೆಂದು ಹೇಗೆ ತಿಳಿಯುತ್ತಿತ್ತು? ಪ್ರೀತಿಪ್ರೇಮದ ಬಗ್ಗೆ ಕದ್ದಾದರೂ ಸರಿ ಮಾತಾಡಬಹುದೆಂದು ಹೇಗೆ ಅರಿವಾಗುತ್ತಿತ್ತು? ಕೂಡಿ ಇರುವುದಕ್ಕಿಂತ ಬೇರೆ ಇದ್ದರೇನೆ ಪ್ರೀತಿ ಹೆಚ್ಚುವುದೆಂದು ಹೇಗೆ ತಿಳಿಯುತ್ತಿತ್ತು? ಮಗಸೊಸೆಗೆ ದಿನಾಲೂ ಬೈಗುಳಗಳ ಬುಟ್ಟಿ ಅಟ್ಟುತ್ತಿದ್ದ ಮಲ್ಲವ್ವತ್ತೆ ಈಗ ಅವರ ಮನೆಗೆ ಹೋಗಿ ತಾಸುಗಟ್ಟಲೆ ಮೊಮ್ಮಗಳ ಜೊತೆ ಆಡವಾಡಿ ಬರುತ್ತಾಳಲ್ಲ? ಸತ್ತರೂ ಸರಿ, ಅವರ ಮುಖ ನೋಡುವುದಿಲ್ಲವೆಂದವಳು ಮುಂಜಾನೆದ್ದು ಲಗುಬಗೆಯಲ್ಲಿ ಹಾಲು ಕರೆದು, ಬೆಣ್ಣೆ ಕಡೆದು ಅವರಿಗೂ ಯಾಕೆ ಕೊಟ್ಟು ಬರುತ್ತಾಳೆ? ನೋಡನೋಡುತ್ತಲೆ ದೇವಪ್ಪ ತನ್ನ ಚಾದಂಗಡಿಯಲ್ಲಿ ಎಷ್ಟೆಲ್ಲ ಬದಲಾವಣೆ ಮಾಡಿದ. ರವೆಉಂಡಿ, ಶಂಕರಪಾಳಿ, ಜಿಲೇಬಿ, ಮೈಸೂರು ಪಾಕ್‌ಗಳನ್ನು ಇಡಲು ಒಂದು ಗಾಜಿನ ಕಪಾಟು ಮಾಡಿಸಿದ. ಮೊದಲು ಎಲ್ಲರೂ ಕೈ ಹಾಕಿ ಅದುಇದು ಎಂದು ತೆಗೆದುಕೊಳ್ಳುವುದಿತ್ತು. ಈಗ ಅವನು ಅಥವಾ ಅನಸವ್ವ ಕೊಟ್ಟರೆ ಮಾತ್ರ ತೆಗೆದುಕೊಳ್ಳಬೇಕು. ಗಾಜಿನ ಫಡಕುಗಳು ಗಾಲಿ ಮೇಲೆ ಆ ಕಡೆ, ಈ ಕಡೆ ಸರಿಯುವುದನ್ನು ನೋಡಲು ಮೊದಲ ದಿನ ನೂರಾರು ಮಂದಿ ಸೇರಿದ್ದರು. ಆವತ್ತು ದೇವಪ್ಪ ಪುಕ್ಕಟೆಯಾಗಿ ಉಂಡಿ, ಕೆಂಪು ಖಾರಾ ಹಚ್ಚಿದ ಚುರುಮುರಿ ಕೊಡಬಹುದೆಂದು ಬಹಳ ಮಂದಿ ನಿರೀಕ್ಷೆ ಮಾಡಿದ್ದರು. ಆದರೆ ಅನಸವ್ವಳೆ ಮುತುವರ್ಜಿ ವಹಿಸಿ 'ನಮ್ಮದು ಧರ್ಮಸಾಲಿಯಲ್ಲ' ಎಂದು ಚಹಾ ಮಾತ್ರ ಹೊರಗಡೆ ಒಂದು ಸ್ಟೀಲ್ ಟಾಕಿಯಲ್ಲಿ ಹಾಕಿಟ್ಟು ಬಂದವರಿಗೆ ಹಾಕಿಕೊಡಲಿಕ್ಕೆ ಒಬ್ಬ ಹುಡುಗನನ್ನು ನೇಮಿಸಿದ್ದಳು. ಬರೀ ಚಹಾ ಕುಡಿಯುವುದಕ್ಕಿಂತ ಬಾಯಲ್ಲಿ ನೀರು ಬರಿಸುವ ಜಿಲೇಬಿ ಕುರುಕುರುವೆನ್ನುವ ಚುರುಮುರಿ ತಿಂದಾಗಲೇ ಜೀವನ ಸಾರ್ಥಕವೆಂದು ಕೆಲವರು ಧಾರಾಳವಾಗಿ ಖರ್ಚು ಮಾಡಿದರು.

ಹೊಟೇಲುಗಳಲ್ಲಿ ತಾವು ಇಷ್ಟಪಟ್ಟಿದ್ದನ್ನು ತಿನ್ನುವವರು ಕಡಿಮೆ. ಮಂದಿ ಏನನ್ನು ತಿನ್ನುತ್ತಿದ್ದಾರೋ ಅದನ್ನೆ ಆಯ್ದುಕೊಳ್ಳುವವರು ಬಹಳ. ಹಾಗಾಗಿ ಒಬ್ಬರನ್ನು ನೋಡಿ ಮತ್ತೊಬ್ಬರು ಜಿಲೇಬಿ ಕೇಳಿದರು. ಅನಸವ್ವ ಅದೇ ಆಗ ಒಳಗಿನಿಂದ ಬಂದು ಚುರುಮುರಿಗೆ ಬಾಳಿಗೆಯಲ್ಲಿ ಎಣ್ಣೆ, ಒಣ ಖಾರ, ಅರಿಶಿನ ಪುಡಿ ಹಾಕಿ ಹುರಿದಿದ್ದ ಸುಡುಸುಡುವ ಶೇಂಗಾಕಾಳು ಸುರುವಿದ ಕೂಡಲೇ ಚುರುಮುರಿಗೆ ಆರ್ಡರ್ ಕೊಡುತ್ತಿದ್ದ ಗಿರಾಕಿಗಳು ಕೂಡ ಹೆಚ್ಚಾದರು. ನಿನ್ನೆ ದಿನ ಬೈಲಹೊಂಗಲದ ಕಲಬುರ್ಗಿ ಅಂಗಡಿಯಿಂದ ತಂದಿದ್ದ ಜಿಲೇಬಿ, ಕರದಂಟು ಮತ್ತು ಅರ್ಧ ಚೀಲ ಖಾರದ ಚುರುಮುರಿ ಖಾಲಿಯಾದವು. ಇದೆಲ್ಲ ಅನಸವ್ವಳ ತಯಾರಿ, ಯೋಜನೆ ಮತ್ತು ಕುಶಲತೆಯಿಂದ ಸಾಧ್ಯವಾಯಿತೆಂದು ದೇವಪ್ಪನಿಗೆ ಅನಿಸಿತು. ಒಂದು ವಾರದಲ್ಲಿ ಆಗುವ ವ್ಯಾಪಾರ ಒಂದೇ ದಿನದಲ್ಲಿ ಆಯಿತು. ಅನಸೂಯೆ ಇಷ್ಟೊಂದು ಪ್ರವೀಣೆಯೆ! ದೇವಪ್ಪ ತನಗೆ ತಾನೆ ಶಹಬ್ಬಾಸಗಿರಿ ಕೊಟ್ಟುಕೊಂಡ. ಆಕೆ ಪ್ರತಿಯೊಂದರಲ್ಲಿಯೂ ಎಷ್ಟೊಂದು ಪೂರ್ವಯೋಜಿತ ಇರುತ್ತಾಳೆ! ಹುಣ್ಣಿವೆ ಎಂದಿದೆ, ಅಮಾವಾಸ್ಯೆ ಯಾವಾಗ ಬರಲಿದೆ, ಮುಂದೆ ಬರುವುದು ಬನದ ಹುಣ್ಣಿಮೆಯೋ, ಭಾರತ ಹುಣ್ಣಿಮೆಯೋ ಓಹ್, ಆಕೆ ಎಷ್ಟೊಂದು ಲೆಕ್ಕ ಹಾಕುತ್ತಿರುತ್ತಾಳೆ! ಗಿರಾಕಿಗಳು ಯಾವ ದಿನ ಬರಲಿಕ್ಕಿಲ್ಲ, ಯಾವ ದಿನ ಹೆಚ್ಚು ಜನರು ಬರಬಹುದು, ಅವಳಿಗೆ ಅಂದಾಜು ಇರುತ್ತಿತ್ತು.

ಮೊದಮೊದಲು ತಾನು ಎಲ್ಲ ತಯಾರು ಮಾಡಿದ್ದನ್ನು ಮರುದಿನ ಚೆಲ್ಲಬೇಕಾಗುತ್ತಿತ್ತು. ಈಗ ಹೆಚ್ಚಾಗಿ ಅಪವ್ಯಯ ಎನ್ನುವುದೇ ಇರುವುದಿಲ್ಲ. ಫೇಲು ಎನ್ನುವ ಶಬ್ದವೆ ಅವಳ ಹತ್ತಿರ ಇಲ್ಲವೆಂದು ಅವನಿಗೆ ಒಂದೊಂದು ಸಲ ತುಂಬ ಆಶ್ಚರ್ಯ ಎನಿಸುವುದು. ಇಂತಹ ಹೆಂಡತಿ ತನಗೆ ದಕ್ಕಿದುದು ತನ್ನ ಅದೃಷ್ಟವೆ ಸರಿ.

***

ಮೊನ್ನೆ ಮೊನ್ನೆ ಅವನ ತಾಯಿ ಬಂದು ಹದಿನೈದು ವರ್ಷಗಳಲ್ಲಿ ಮಗನ ಹೊಟೇಲು ಇಷ್ಟೊಂದು ಬೆಳಯಿತೆ ಎಂದು ಸಂತೋಷಪಟ್ಟಳು. ಅನಸವ್ವಳನ್ನು ಅವ್ವ ಹೊಗಳಿಯೆ ಹೊಗಳಿದಳು. 'ನೋಡೊ ದೇವಣ್ಣ, ಗಿಳಿ ಗಿರಿಯಪ್ಪ ಹೇಳಿದ್ದೆಲ್ಲ ಖರೆಯಾತು. ಅಲ್ಲ?' ಅವ್ವ ಗಿಣಿಮೂಗಿನ ಗಿರಿಯಪ್ಪನನ್ನು ನೆನೆದಾಗ ದೇವಪ್ಪನಿಗೆ ಹೌದಲ್ಲ ಎನಿಸಿತು. ಅವನನ್ನು ಮಲ್ಲೂರಿಗೂ ಕರೆತಂದು ಸತ್ಕರಿಸಬೇಕು. ಹಿಂದೆ ಬಂದಾಗ ಅವ್ವನಿಗೆ ತುಸು ಬಿಡುವು ಸಿಗುತ್ತಿತ್ತು. ಆದರೆ ಈ ಸಲ ಅವಳಿಗೆ ಬಿಡುವೇ ಇಲ್ಲ. ಎರಡು ಮೊಮ್ಮಕ್ಕಳು ಬಂದಿದ್ದಾರೆ. ಎರಡೂ ಹೆಣ್ಣುಮಕ್ಕಳು ಥೇಟ್ ಅನಸವ್ವಳಂತೆಯೆ ಎನ್ನುತ್ತಾಳೆ. ಹುಡುಗಿಯರಿಬ್ಬರನ್ನು ಹಿಡಿಯುವುದು ಎಷ್ಟೊಂದು ಕಷ್ಟ. ಇಬ್ಬರದೂ ಮುಗಿಯದ ಜಗಳ. ಅವರನ್ನು ಅನಸವ್ವ ಬೈಲಹೊಂಗಲದ ಶಾಲೆಗೆ ಕಳಿಸುತಿದ್ದಾಳೆ.

'ರೊಕ್ಕ ಜಾಸ್ತಿ ಆಗಿದೆಯೇನು? ಊರ ಶಾಲೆಗೆ ಹಚ್ಚಿದ್ದರೆ ಏನಾಗುತ್ತಿತ್ತು?' ಅವ್ವನ ಮಾತಿಗೆ ಮಗನಲ್ಲಿ ಉತ್ತರವಿರಲಿಲ್ಲ. ಆ ಕಾರಣಕ್ಕೆ ದೇವಪ್ಪ ಮತ್ತು ಅನಸವ್ವಳಿಗೆ ಹಿಂದೆ ದೊಡ್ಡ ಜಗಳ ಆಗಿತ್ತು. ಮಕ್ಕಳು ಓದಿ ಮುಂದೆ ಬರುವುದು ಇಷ್ಟವಿಲ್ಲವೇನು ಎಂದು ಹೆಂಡತಿಯ ವಾದ. ಕೊನೆಗೆ ದುಂಡಪ್ಪಕಾಕಾ ಬಂದು 'ಅನಸವ್ವ ಜವಾಬ್ದಾರಿ ತಗೊಂಡಿದಾಳೆ ಬಿಡು, ನೀನು ಊರೂರು ತಿರುಗಾಂವ' ಎಂದನಂತೆ. ಇತ್ತೀಚೆಗೆ ಎಲ್ಲರೂ ಹೆಚ್ಚಾಗಿ ಅನಸವ್ವಳ ಪಕ್ಷವನ್ನೆ ವಹಿಸುತ್ತಾರೆಂದು ಮಗ ನೊಂದು ಹೇಳಿದ. ತಾಯಿಗೆ ಅನಸವ್ವಳ ಮೇಲೆ ಯಾಕೊ ಅನುಮಾನ ಬರತೊಡಗಿತು. ಸೊಸೆ ಒಬ್ಬಳೆ ಹೊಂಗಲಕ್ಕೆ ಹೋಗಿಬರುವುದು ಅತ್ತೆಗೆ ಹಿಡಿಸಲಿಲ್ಲ. ಸಣ್ಣಪುಟ್ಟ ಸ್ಟೇಷನರಿ ಸಾಮಾನು ತಂದು ಪರಿಚಯದ ಹೆಂಗಸರಲ್ಲಿ ಮಾರಾಟ ಮಾಡುತ್ತಾಳೆ. ಊರಲ್ಲಿಯ ಕೆಲವು ಮಂದಿಗೆ ಉದ್ರಿ ಕೊಟ್ಟು ಉದ್ರಿಯ ರುಚಿ ಹಚ್ಚಿಸಿದ್ದಾಳೆ. ಇದರಿಂದ ಮಂದಿ ಉದ್ರಿಯ ಪಟ್ಟಿ ಉದ್ದವಾಗುತ್ತ ಹೋಗುತ್ತಿದೆ. ದೇವಣ್ಣ ಕೊಡದಿರುವುದಕ್ಕೆ ಅವನಿಗೆ ಜಿಪುಣ ದೇವಣ್ಣ ಬಹಿರಂಗವಾಗಿಯೇ ಕರದಾಗ ಅವನಿಗೆ ಹೇಗೆ ಅನ್ನಿಸಬೇಡ? 'ಮಂದಿ ನಿನ್ನ ಗಂಡಗ ಅಸಂಯ್ಯ ಮಾಡಿದ್ರೂ ನೀನು ಸುಮ್ನ ಇರ್ತಿಯೇನು?' ಶಿವವ್ವ ಸೊಸೆಗೆ ಗಂಡನ ಬಗ್ಗೆ ಅಭಿಮಾನವಿಡಲು ಹೇಳಿದಳು. ಸೊಸೆ ಗಂಡನ ಬಗ್ಗೆ ದೂರುಗಳ ಉದ್ದ ಪಟ್ಟಿಯನ್ನೆ ಹಿಡಿದಳು. ಮಗ ದೇವಪ್ಪ ಯಾಕೆ ಇತ್ತೀಚೆಗೆ ಹೊರಗಡೆ ಅಡುಗೆ ಮಾಡಲು ಹೋಗುತ್ತಿದ್ದಾನೆ? ಅದರ ಆದಾಯ ಎಲ್ಲಿ ಇಡುತ್ತಾನೆ? ದುಡ್ಡು ಉಳಿಯುವುದಿಲ್ಲ ಎನ್ನುತ್ತಾನೆ.

ಹಾಗಿದ್ದರೆ ಅಲ್ಲಿಗೆ ಯಾಕೆ ಹೋಗುವುದು? ಅವನ ಗುಂಪಿನಲ್ಲಿ ಮೂರ್ನಾಲ್ಕು ಜನ ಹೆಂಗಸರಿದ್ದಾರಂತೆ! ಅನಸವ್ವ ಮೂಗು ಏರಿಸುತ್ತ ಕೇಳಿದಳು. ಮಗನಿಗೆ ಇದೆಲ್ಲ ಯಾಕೆ ಬೇಕಾಗಿತ್ತು? ಹೊಟೇಲಿನಿಂದ ಬರುವ ಇಷ್ಟು ರೊಕ್ಕ ಅವನಿಗೆ ಸಾಲದೆ? ಹೊಟೇಲ್ ಬಿಡುವೆನೆ ಹೊರತು ಮದುವೆ ಅಡುಗೆಯ ಕಾಂಟ್ರಾಕ್ಟ್ ಬಿಡಲಾರೆ ಎಂದನಂತೆ! ಓಹ್! ಇದೆಲ್ಲ ಎಲ್ಲಿಗೆ ಸಾಗುತ್ತಿದೆ! ತಾಯಿಯ ಎಡಗಣ್ಣು ಹಾರಿತು. ಎಡಗಣ್ಣು ಹಾರಿದರೆ ಒಳ್ಳೆಯದೋ, ಬಲಗಣ್ಣು ಹಾರಿದರೆ ಒಳ್ಳೆಯದೋ? ಒಂದು ಕ್ಷಣ ಅವಳನ್ನು ಸಂದಿಗ್ಧತೆ ಕಾಡಿತು. ತಲ್ಲಣಿಸಿದಳು. ಗಿಣಿಮೂಗಿನ ಗಿರಿಯಪ್ಪನಲ್ಲಿ ಈ ಸಲ ಪಟ್ಟು ಹಿಡಿದು ಕೇಳಬೇಕು! ಯಾರದು ತಪ್ಪು? ದೇವಪ್ಪನದೆ? ಅನಸವ್ವಳದೆ? ಒಬ್ಬರ ಮನಸ್ಸನ್ನು ಸಂಪೂರ್ಣವಾಗಿ ಅರಿತು ಅವರನ್ನು ತಿದ್ದಬಹುದೆ? ಈ ಶಕುನವನ್ನು ಗಿರಿಯಪ್ಪನಿಗೆ ಎಷ್ಟೇ ಕಾಣಿಕೆ ಕೊಟ್ಟಾದರೂ ಕೇಳಬೇಕು!

***

ಹತ್ತುಹನ್ನೆರಡು ವರ್ಷಗಳಿಂದ ಎರಡು ದೇಹ, ಒಂದೇ ಜೀವ ಎನ್ನುವಂತಿದ್ದ ದೇವಪ್ಪ ಮತ್ತು ಅನಸವ್ವರಿಗೆ ಒಮ್ಮಿಂದೊಮ್ಮೆಲೆ ಏನಾಯಿತು? ಯಾಕೆ ಅವರಲ್ಲಿ ಹಗೆತನ ಹುಟ್ಟಿಕೊಂಡಿತು? ಹೊಟೇಲಿನ ಬಗ್ಗೆ ಏನೇ ಕೇಳುವುದಿದ್ದರೂ ಅನಸೂಯೆಯನ್ನು ಕೇಳಿರಿ ಎನ್ನುತ್ತಿದ ದೇವಪ್ಪ ಇತ್ತೀಚೆಗೆ ಯಾಕೆ ಉದ್ರಿ ದುಡ್ಡನ್ನು ತನ್ನ ಕೈಯಲ್ಲಿ ಮಾತ್ರ ಕೊಡಬೇಕು, ಹೆಂಡತಿಯ ಹತ್ತಿರ ಕೊಡಬೇಡಿರೆಂದು ಹೇಳುತ್ತಿದ್ದಾನೆ? 'ಎಲ್ಲವನ್ನೂ ಬುರ್ಬುಶ್ ಮಾಡಿದ್ದಾಳೆ, ಹೊಂಗಲದ ಪರಿಚಯಸ್ಥರಲ್ಲಿ ಸಾಲ ಇಸಿದುಕೊಂಡಿದ್ದಾಳೆ, ಹಾದಿ ಬಿಟ್ಟಿದ್ದಾಳೆ, ಆಕೆಗೇನು ಬುದ್ಧಿ ಹೇಳುವುದು? ತನ್ನ ಮಾತು ಕೇಳಿದರಲ್ಲವೆ ಬುದ್ಧಿವಾದ ಹೇಳುವುದು?' ಇಂತಹ ಮಾತನ್ನು ದೇವಪ್ಪ ಒಂದು ಸಲ ಯಾರಲ್ಲಿಯೋ ಹೇಳಿದ್ದಾನೆಂದು ಕೆಲವರು ಮಾತಾಡಿಕೊಂಡರು. ಗಂಡ ಹಾಗೆ ಅಂದಿದ್ದು ಅವಳ